# ಸಜ್ಜನಚಿತ್ತವಲ್ಲಭ:






ಪಂಡಿತರತ್ನ

## ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ

ಜನ್ಮ ಶತಾಬ್ದ 1888-1988

## ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಕೃತಿಗಳು

| ಸಂಖ್ಯೆ | ಕೃತಿಯ ಹೆಸರು | ಪ್ರಕಟಿಸಿದ್ದು |
|---|---|---|
| 1. | ಪಂಚಸ್ತೋತ್ರ : ಭಾವ ಪ್ರಕಾಶಿಕಾ (154 ಪುಟಗಳು) | 1913 |
| 2. | ಜೈನ ಪದ ಸಮುಚ್ಚಯ (36) | 1911 |
| 3. | ಜಿನಭಜನಸಾರ (152) | 1911, 1919, 1926, 1947 |
| 4. | ಪೂಜಾಸಾರಸಮುಚ್ಚಯಃ (308) | 1919, 1923, 1936 |
| 5. | ರತ್ನಾಕರಸಪಾದಶತಕಮ್ (132) | 1922 |
| 6. | ಶತಕತ್ರಯೀ (124) | 1922 |
| 7. | ಶತಕತ್ರಯ (ರತ್ನಾಕರ ವಿರಚಿತ) (150) | 1922, 1941 |
| 8. | ಅನ್ಯಯೋಗವ್ಯವಚ್ಛೇದಿಕಾ (102) | 1923 |
| 9. | ಮಹಾಪುರಾಣ (ಪೂರ್ವಪುರಾಣಂ ಮತ್ತು ಉತ್ತರಪುರಾಣಂ) (3242) | 1925, 1933, 1940, 1981 |
| 10. | ಜಿನಭಕ್ತಿ ಸಾರವು (ಪರಿಶೋಧಿಸಲ್ಪಟ್ಟ ಗ್ರಂಥ) (32) | 1925 |
| 11. | ಮೂರು ನೋಂಪಿಗಳ ಕಥೆಗಳು (32) | 1926, 1927 |
| 12. | ದ್ರವ್ಯ ಸಂಗ್ರಹಃ—(ಜೈನ ಸಿದ್ಧಾಂತ ಸಂಗ್ರಹ) (118) | 1928, 1951, 1974 |
| 13. | ನೇಮಿಜಿನೇಶಸಂಗತಿ (ಹರಿವಂಶ ಪುರಾಣ) (630) | 1931 |
| 14. | ಶಾಸ್ತ್ರೀಯ ಯಜ್ಞ—ಪುಸ್ತಕ ವಿಮರ್ಶೆ (38) | 1931 |
| 15. | ಶ್ರವಣಬೆಳ್ಗೊಳ ಶ್ರೀಗಳವರ ಭಾಷಣ ಸಂಗ್ರಹ (344) | 1932 |
| 16. | ನಂದೀಶ್ವರಾಷ್ಟಾಹ್ನಿಕಪೂಜಾದಿಸಂಗ್ರಹಃ (230) | 1932, 1934, 1938 |
| 17. | ನಾಗಕುಮಾರಚರಿತಂ (384) | 1933 |
| 18. | ಶತಕದ್ವಯ (ರತ್ನಾಕರ ವಿರಚಿತ) (48) | 1933 |
| 19. | ದಶಭಕ್ತಿಃ (276) | 1934, 1953 |
| 20. | ಶ್ರೀ ಪಾರ್ಶ್ವತೀರ್ಥಂಕರಚರಿತ (36) | 1934 |
| 21. | ಚತುರ್ವಿಂಶತಿತೀರ್ಥಂಕರಾರಾಧನ (278) | 1935 |
| 22. | ಶ್ರೀ ಜಂಬೂಸ್ವಾಮಿಚರಿತ (66) | 1935, 1951 |
| 23. | ದ್ವಾದಶಾನುಪ್ರೇಕ್ಷೆ (48) | 1936, 1950 |
| 24. | ಪರಮಾತ್ಮಬೋಧ (24) | 1937 |
| 25. | ಮೃತ್ಯುಮಹೋತ್ಸವ (30) | 1938 |

(3ನೆ ರಕ್ಷಾಪುಟವನ್ನು ನೋಡಿ)

ರತ್ನತ್ರಯ
29

ಜನ್ಮಶತಾಬ್ದಿ ಪ್ರಕಟಣೆ - ೨೦

ಶ್ರೀ ಮಲ್ಲಿಷೇಣಾಚಾರ್ಯ ವಿರಚಿತ

# ಸಜ್ಜನಚಿತ್ತವಲ್ಲಭಃ

ಸಂಪಾದಕರು :

ಎರ್ತೂರು ಶಾಂತಿರಾಜಶಾಸ್ತ್ರಿ

ಪ್ರಕಾಶನ :

ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿಟ್ರಸ್ಟ್

ಜನ್ಮಶತಾಬ್ದಿ ೧೮೮೮ - ೧೯೮೮

SAJJANACHITTHAVALLABHAHA Written in Kannada by Panditaratna A. Shanthiraja Shastry, Mysore. Published by : Panditaratna A. Shanthiraja Shastry Trust, 'Shanthi' No. 369, 42nd Cross, 8th Block Jayanagar, Bangalore-82. Second Edition, February 1989
Pp. (vi + 14) 1000 Copies, Price Rs. 3/-

© Panditaratna A. Shanthiraja Shastry Trust.

ದ್ವಿತೀಯ ಮುದ್ರಣ : ಫೆಬ್ರವರಿ ೧೯೮೯
೧೦೦೦ ಪ್ರತಿಗಳು

ಬೆಲೆ : ಮೂರು ರೂಪಾಯಿಗಳು.

ಪ್ರಥಮ ಮುದ್ರಣ : 1948 – ಉಷಾ ಪ್ರೆಸ್, ಮೈಸೂರು.

ದ್ವಿತೀಯ ಮುದ್ರಣ : 1989 - ಕೀರ್ತಿ ಪ್ರಿಂಟರ್ಸ್, ಬೆಂಗಳೂರು.

## ಆಶೀರ್ವಚನ

ಆಚಾರ್ಯ ಶ್ರೀ ಮಲ್ಲಿಷೇಣರಿಂದ ರಚಿತವಾದ "ಸಜ್ಜನಚಿತ್ತವಲ್ಲಭಃ" ಕೃತಿಯಲ್ಲಿ ಮನಮುಟ್ಟುವಂತೆ ಯತಿಗಳ, ಶ್ರಾವಕರ ಗುರಿಯು ಏನಾಗಿರಬೇಕು ಎಂಬುದರವರ್ಣನೆಯಿದ್ದು ಪ್ರತಿಯೊಬ್ಬರೂ ತಮ್ಮ ಆತ್ಮಕಲ್ಯಾಣಕ್ಕಾಗಿ ಓದಿ ಮನನ ಮಾಡುವುದಲ್ಲದೆ ಆಚರಣೆಗೂ ತಂದುಕೊಂಡಲ್ಲಿ ಮನುಷ್ಯಭವವನ್ನು ಸಾರ್ಥಕ ಪಡಿಸಿಕೊಂಡಂತಾಗುತ್ತದೆ.

ಕಳೆದ ಜನ್ಮದಲ್ಲಿ ಈ ಭವದಲ್ಲಿ ಸುಖ ದೊರೆಯಲು ದಾನವನ್ನಾಗಲೀ, ತಪವನ್ನಾಗಲೀ ಮಾಡಿರುವೆಯೋ ? ಮಾಡಿಲ್ಲವಾದರೆ ಈಗ ಸುಖವು ಹೇಗೆ ದೊರೆಯುವುದು ? ಹಿಂದಿನ ಭವದಲ್ಲಿ ಮಾಡಿರುವುದಕ್ಕೆ ಅನುಸಾರವಾಗಿ ಈ ಭವದಲ್ಲಿ ಫಲ ದೊರೆತಿದೆ. ರೈತನು ಧಾನ್ಯವನ್ನು ಬಿತ್ತದೆಯೇ ಬೆಳೆಯನ್ನು ಪಡೆಯುತ್ತಾನೆಯೇ ? ಶರೀರದಲ್ಲಿ ವ್ಯರ್ಥವಾಗಿ ಮೋಹವನ್ನು ಮಾಡಬೇಡ ಎಂಬ ಆಣಿ ಮುತ್ತೊಂದು ಈ ಪುಟ್ಟ ಕೃತಿಯಲ್ಲಿದೆ. ಈಗ ಅನುಭವಿಸುತ್ತಿರುವ ಜೀವನಕ್ಕೆ ಹಿಂದಿನ ಭವದ ಸಾಧನೆಯೇ ಕಾರಣವೆಂಬುದನ್ನು ಮರೆಯಬಾರದು ಹಾಗೂ ಜೀವನವನ್ನು ರೂಪಿಸಿಕೊಳ್ಳುವುದು ಅಗತ್ಯ ಎಂಬ ಎಚ್ಚರಿಕೆಯು ಈ ಕೃತಿಯಲ್ಲಿ ಹಾಸು ಹೊಕ್ಕಿದೆ.

ಸ್ವರ್ಗೀಯ ಶ್ರೀ ಎ. ಶಾಂತಿರಾಜಶಾಸ್ತ್ರಿಗಳವರು ತಮ್ಮ ಸರಳ ಸುಂದರ ಅನುವಾದದೊಡನೆ ಇಂತಹ ಹಲವಾರು ಕೃತಿಗಳನ್ನು ಕನ್ನಡಕ್ಕೆ ತಂದುಕೊಟ್ಟಿದ್ದಾರೆ. ಅವರ ಜನ್ಮಶತಾಬ್ದಿಯ ನಿಮಿತ್ತ ಇಂತಹ ಅಮೂಲ್ಯ ಕೃತಿಗಳನ್ನು ಪುನರ್ ಮುದ್ರಣ ಮಾಡಿಸುವ ಯೋಜನೆ ಪ್ರಶಂಸನೀಯವಾಗಿದೆ. ಪ್ರತಿಯೊಂದು ಮನೆಯಲ್ಲಿ ಇಂತಹ ಅಮೂಲ್ಯ ಕೃತಿಗಳು ಇರುವುದು ಅವಶ್ಯವಲ್ಲದೆ ಪ್ರತಿಯೊಬ್ಬರೂ ಸ್ವಾಧ್ಯಾಯ ಮಾಡುವುದು ಅಗತ್ಯವೂ ಆಗಿದೆ.

ಈ ಕೃತಿಯ ಪುನರ್ ಮುದ್ರಣಕ್ಕೆ ನೆರವಾಗುತ್ತಿರುವ, ಪ್ರಕಾಶನದಲ್ಲಿ ನೆರವಾಗುತ್ತಿರುವ ಎಲ್ಲರಿಗೂ ಸನ್ಮಂಗಲವಾಗಲಿ.

ಕರ್ಮಯೋಗಿ
**ಶ್ರವಣಬೆಳಗೊಳ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ.**

# ಪ್ರಕಾಶಕರ ವಿಜ್ಞಾಪನೆ

ಈ 'ಸಜ್ಜನಚಿತ್ತವಲ್ಲಭಃ' ಗ್ರಂಥವನ್ನು ೧೯೪೮ರಲ್ಲಿ ಮೈಸೂರಿನ ಶ್ರೀಮತಿ ಪಾಯಮ್ಮನವರು ಮುದ್ರಣ ಮಾಡಿಸಿ ಶಾಸ್ತ್ರದಾನ ಮಾಡುವುದಕ್ಕೋಸ್ಕರ ಪ್ರಕಾಶಪಡಿಸಿದ್ದರು.

ಈಗ ಈ ಗ್ರಂಥದ ದ್ವಿತೀಯ ಮುದ್ರಣಕ್ಕೆ ಧರ್ಮಾಭಿಮಾನಿಗಳಾದ ಬೆಂಗಳೂರಿನ ಶ್ರೀ ಜಯಕೀರ್ತಿಯವರು ಸಹಕಾರ ನೀಡಿ ತಾವೇ ಮುದ್ರಣ ಮಾಡಿಸಿ ಪ್ರಕಾಶಪಡಿಸಿರುವುದು ಪ್ರಶಂಸನೀಯ ಹಾಗೂ ಅನುಕರಣೀಯ.

ಶ್ರೀಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು ಈ ಮುದ್ರಣಕ್ಕೆ 'ಶುಭಾಶೀರ್ವಚನ' ದಯಪಾಲಿಸಿರುತ್ತಾರೆ. ಶ್ರೀಗಳವರಿಗೆ ಈ ಟ್ರಸ್ಟ್ ತನ್ನ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಶ್ರೀ ಕೀರ್ತಿ ಪ್ರಿಂಟರ್ಸ್‌ನ ಮಾಲೀಕರಿಗೂ, ಅಂದವಾದ ರಕ್ಷಾಕವಚವನ್ನು ರಚಿಸಿ ಕೊಟ್ಟ ಬೆಂಗಳೂರಿನ ಶ್ರೀ ಆರ್. ಎಸ್. ಪದ್ಮರಾಜ್‌ರವರಿಗೂ ಮತ್ತು ರಕ್ಷಾಕವಚವನ್ನು ಮುದ್ರಿಸಿಕೊಟ್ಟ ಬೆಂಗಳೂರಿನ ಬಿ. ಬಿ. ಡಿ. ಪವರ್ ಪ್ರೆಸ್ಸಿನ ಮಾಲೀಕರಿಗೂ ಈ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

**ಬೆಂಗಳೂರು** — **ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್**

೩೧-೧-೧೯೮೯

# ಸಮರ್ಪಣೆ



**ಸ್ವರ್ಗೀಯ ಶ್ರೀಮತಿ ಅನಂತಮ್ಮನವರು**

ಸ್ವ|| ಶ್ರೀಮತಿ ಅನಂತಮ್ಮನವರು ಗೌರಿಬಿದನೂರಿನ ಸ್ವ|| ಶ್ರೀ ಆರ್. ಪಿ. ರಾಜಣ್ಣ ಮತ್ತು ಶ್ರೀಮತಿ ಜ್ವಾಲಮ್ಮನವರ ಮಗಳು. ಇವರಿಗೆ ಬಾಲ್ಯದಿಂದಲೂ ಮಾತಾಪಿತೃಗಳ ಸದಾಚಾರಗಳ ಪ್ರಭಾವವಾಗಿದ್ದಿತು. ಬಾಲ್ಯದಲ್ಲಿಯೇ ತಂದೆಯವರು ವಿಧಿವಶರಾದ್ದರಿಂದ ತಾಯಿ ಮತ್ತು ಅಣ್ಣಂದಿರ ರಕ್ಷಣೆಯಲ್ಲೇ ಬೆಳೆದರು. ಬಹು ಮೃದುಸ್ವಭಾವದವರಾಗಿದ್ದ ಇವರು ಎಲ್ಲಾ ಧಾರ್ಮಿಕ ಸಮಾರಂಭಗಳಲ್ಲೂ ಭಾಗವಹಿಸುತ್ತಿದ್ದರು. ಜಿನಪೂಜೆ, ಗುರುಸೇವೆ, ಶಾಸ್ತ್ರ ಶ್ರವಣ, ಸಂಯಮ, ತಪ ಮತ್ತು ದಾನಗಳೆಂಬ ಶ್ರಾವಕರ ಆರುವಿಧಿಗಳನ್ನು ತಪ್ಪದೆ ಆಚರಿಸುತ್ತ, ಪತಿಯಾದ ಬೆಳ್ಳೂರಿನ ಶ್ರೀ ಡಿ. ಬಿ. ಗಂಗಯ್ಯನವರಿಗೆ ಛಾಯಾನುವರ್ತಿಯಾಗಿ ಪಾತಿವ್ರತ್ಯದಿಂದ ಆದರ್ಶಶ್ರಾವಕಿಯಾಗಿ ಬಾಳಿದವರು.

ಸ್ವ|| ಶ್ರೀಮತಿ ಅನಂತಮ್ಮನವರಿಗೆ ಶ್ರೀ ಜಯಕೀರ್ತಿ, ಚಂದ್ರಕೀರ್ತಿ, ಸತ್ಯಂಧರಕುಮಾರ ಮತ್ತು ಮಹಾವೀರಪ್ರಸಾದ ಎಂಬ ನಾಲ್ವರು ಪುತ್ರರೂ, ಬ್ರಾಹ್ಮಿಲಾದೇವಿ ಮತ್ತು ಜಯಂತಿಮಾಲ ಎಂಬ ಈರ್ವರು ಪುತ್ರಿಯರೂ ಜನಿಸಿದರು. ಮಕ್ಕಳನ್ನೂ ಸಹ ಸಮ್ಯಕ್ತ್ವ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿ ಸಜ್ಜನರಾಗಿ ಸುಸಂಸ್ಕೃತರಾಗುವಂತೆ ಬೆಳೆಸಿದರು. ಇವರ ಜ್ಯೇಷ್ಠ

ಪುತ್ರ ಶ್ರೀ ಜಯಕೀರ್ತಿಯವರು ಬೆಂಗಳೂರಿನಲ್ಲಿ 'ಕೀರ್ತಿ ಪ್ರಿಂಟರ್ಸ್' ಎಂಬ ಮುದ್ರಣಾಲಯವನ್ನು ನಡೆಸುತ್ತಾ ಇದುವರೆಗೆ ಅನೇಕ ಧರ್ಮ ಗ್ರಂಥಗಳನ್ನು ಮುದ್ರಿಸುತ್ತಾ ಬಂದಿದ್ದಾರೆ. ಅಲ್ಲದೆ ತಂದೆಗೆ ವಿಧೇಯನಾದ ಮಗನೆನಿಸಿ ಕೊಂಡು, ತಮ್ಮಂದಿರುಗಳನ್ನೂ ಸಹ ಸನ್ಮಾರ್ಗದಲ್ಲಿ ನಡೆದು ಬರುವಂತೆ ಮಾರ್ಗದರ್ಶಿಯಾಗಿದ್ದಾರೆ. ವಿಧಿವಶರಾದ ತಮ್ಮ ಪೂಜ್ಯ ಮಾತೃಶ್ರೀ ಅನಂತಮ್ಮನವರ ದಿವ್ಯಸ್ಮರಣಾರ್ಥವಾಗಿ

"ಸಜ್ಜನಚಿತ್ತವಲ್ಲಭಃ"

ಎಂಬ ಈ ಗ್ರಂಥವನ್ನು (ದ್ವಿತೀಯ ಮುದ್ರಣ) ತಾವೇ ಮುದ್ರಿಸಿ ಪ್ರಕಾಶ ಪಡಿಸಿದ್ದಾರೆ.

ಇವರಿಗೆ **ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್** ಆಭಾರಿಯಾಗಿದೆ.

ಓಂ

ನಮಃ ಸಿದ್ಧೇಭ್ಯಃ

ಶ್ರೀ ಮಲ್ಲಿಷೇಣಾಚಾರ್ಯವಿರಚಿತ

# ಸಜ್ಜನಚಿತ್ತವಲ್ಲಭಃ

**ನತ್ವಾ ವೀರಜಿನಂ ಜಗತ್ತ್ರಯಗುರುಂ ಮುಕ್ತಿಶ್ರಿಯೋ ವಲ್ಲಭಂ**
**ಪುಷ್ಪೇಷುಕ್ಷಯನೀತಿಬಾಣನಿವಹಂ ಸಂಸಾರದುಃಖಾಪಹಂ ।**
**ವಕ್ಷ್ಯೇ ಭವ್ಯಜನಪ್ರಬೋಧಜನನಂ ಗ್ರಂಥಂ ಸಮಾಸಾದಹಂ**
**ನಾಮ್ನಾ ಸಜ್ಜನಚಿತ್ತವಲ್ಲಭಮಿಮಂ ಶೃಣ್ವಂತು ಸಂತೋ ಜನಾಃ ॥೧॥**

೧. **ಭಾವಾರ್ಥ** :—ಮೂರು ಲೋಕಗಳಿಗೆ ಸ್ವಾಮಿಯೂ ಮೋಕ್ಷ ಲಕ್ಷ್ಮಿಗೆ ಪ್ರಿಯಪತಿಯೂ ಮನ್ಮಥನ ಪಂಚಬಾಣಗಳನ್ನು ನಾಶಮಾಡುವ ನೀತಿ ಗಳೆಂಬ ಬಾಣಗಳ ಸಮೂಹವುಳ್ಳವನೂ ಸಂಸಾರದುಃಖವನ್ನು ನಾಶಮಾಡು ವವನೂ ಆದ ಮಹಾವೀರ—ವರ್ಧಮಾನ ಜಿನೇಶ್ವರನನ್ನು ನಮಸ್ಕರಿಸಿ ಭವ್ಯ ಜನರಿಗೆ ತಿಳಿವಳಿಕೆಯನ್ನುಂಟುಮಾಡುವುದೂ ಸಜ್ಜನಚಿತ್ತವಲ್ಲಭವೆಂದು ಹೆಸರುಳ್ಳುದೂ ಆದ ಗ್ರಂಥವನ್ನು ನಾನು ಸಂಕ್ಷೇಪದಿಂದ ಹೇಳುವೆನು. ಸಜ್ಜನರು ಕೇಳಬೇಕು.

**ರಾತ್ರಿಶ್ಚಂದ್ರಮಸಾ ವಿನಾಬ್ಜನಿವಹೈರ್ನೋ ಭಾತಿ ಪದ್ಮಾಕರೋ**
**ಯದ್ವತ್ಪಂಡಿತಲೋಕವರ್ಜಿತಸಭಾ ದಂತೀವ ದಂತಂ ವಿನಾ ।**
**ಪುಷ್ಪಂ ಗಂಧವಿವರ್ಜಿತಂ ಮೃತಪತಿಃ ಸ್ತ್ರೀ ಚೇಹ ತದ್ವನ್ಮುನಿ**
**ಶ್ಚಾರಿತ್ರೇಣ ವಿನಾ ನ ಭಾತಿ ಸತತಂ ಯದ್ಯಪ್ಯಸೌ ಶಾಸ್ತ್ರವಾನ್ ॥೨॥**

೨. ಚಂದ್ರನಿಲ್ಲದ ರಾತ್ರಿಯೂ ಕಮಲ ಸಮೂಹಗಳಿಲ್ಲದ ಕಮಲ ಸರೋವರವೂ ವಿದ್ವಾಂಸರಿಲ್ಲದ ಸಭೆಯೂ ಹಲ್ಲಿಲ್ಲದ ಆನೆಯೂ ಪರಿಮಳ ವಿಲ್ಲದ ಪುಷ್ಪವೂ ವಿಧವೆಯಾದ ಸ್ತ್ರೀಯೂ ಹೇಗೆ ಶೋಭಿಸುವುದಿಲ್ಲವೋ ಹಾಗೆ ಚಾರಿತ್ರವಿಲ್ಲದ ಈ ಮುನಿಯೂ, ಶಾಸ್ತ್ರವುಳ್ಳವನಾದರೂ ಎಂದೂ ಶೋಭಿಸುವುದಿಲ್ಲವು. ಮುನಿಯು ಜ್ಞಾನಿಯಾಗಿದ್ದರೂ ಚಾರಿತ್ರವಿಲ್ಲದಿದ್ದರೆ ಎಂದೂ ಶೋಭಿಸುವುದಿಲ್ಲವೆಂದು ಭಾವವು.

**ಕಿಂ ವಸ್ತ್ರತ್ಯಜನೇನ ಭೋ ಮುನಿರಸಾವೇತಾವತಾ ಜಾಯತೇ**
**ಕ್ಷ್ವೇಳೇನ ಚ್ಯುತಪನ್ನಗೋ ಗತವಿಷಃ ಕಿಂ ಜಾತವಾನ್ ಭೂತಲೇ ।**
**ಮೂಲಂ ಕಿಂ ತಪಸಃ ಕ್ಷಮೇಂದ್ರಿಯಜಯಃ ಸತ್ಯಂ ಸದಾಚಾರತಾ**
**ರಾಗಾದೀಂಶ್ಚ ಬಿಭರ್ತಿ ಚೇನ್ನ ಸ ಯತಿರ್ಲಿಂಗೀ ಭವೇತ್ಕೇವಲಂ ॥೩॥**

೩. ಎಲೈ! ಈ ಮುನಿಯು ವಸ್ತ್ರತ್ಯಾಗದಿಂದ ಇಷ್ಟರಿಂದ ಮುನಿಯಾಗುತ್ತಾನೋ? ಪೊರೆಯನ್ನು ಕಳಚಿದ ಹಾವು ಭೂತಳದಲ್ಲಿ ವಿಷವಿಲ್ಲದುದಾಗಿ ಆಗಿದೆಯೋ? ತಪಸ್ಸಿಗೆ ಮೂಲವಾವುದೆಂದರೆ ಕ್ಷಮೆಯೂ ಇಂದ್ರಿಯಜಯವೂ ಸತ್ಯವೂ ಸದಾಚಾರತೆಯೂ ಆಗಿದೆ. ಅವನು ರಾಗದ್ವೇಷಮೋಹಾದಿಗಳನ್ನು ಧರಿಸಿರುವವನಾಗಿದ್ದರೆ ಮುನಿಯಲ್ಲವು—ಬರೀ ಮುನಿವೇಷಧಾರಿಯಾಗಿರುವವನು.

**ದೇಹೇ ನಿರ್ಮಮತಾ ಗುರೌ ವಿನಯತಾ ನಿತ್ಯಂ ಶ್ರುತಾಭ್ಯಾಸತಾ**
**ಚಾರಿತ್ರೋಜ್ಜ್ವಲತಾ ಮಹೋಪಶಮತಾ ಸಂಸಾರನಿರ್ವೇಗತಾ ।**
**ಅಂತರ್ಬಾಹ್ಯಪರಿಗ್ರಹತ್ಯಜನತಾ ಧರ್ಮಜ್ಞತಾ ಸಾಧುತಾ**
**ಸಾಧೋ ಸಾಧುಜನಸ್ಯ ಲಕ್ಷಣಮಿದಂ ಸಂಸಾರವಿಚ್ಛೇದಕಂ ॥ ೪ ॥**

೪. ಎಲೈ ಸಾಧುವೆ! ಶರೀರದಲ್ಲಿ ಮಮತ್ವವಿಲ್ಲದಿರುವಿಕೆಯೂ ಗುರುವಿನಲ್ಲಿ ವಿನಯಪರತೆಯೂ ಯಾವಾಗಲೂ ಶಾಸ್ತ್ರಾಧ್ಯಯನವೂ ಚಾರಿತ್ರದಿಂದ ಶೋಭಿತನಾಗಿರುವಿಕೆಯೂ ಉತ್ತಮವಾದ ಸ್ಥೈರಣೆಯೂ ಸಂಸಾರದಲ್ಲಿ ವೈರಾಗ್ಯಭಾವವೂ ಬಾಹ್ಯಾಭ್ಯಂತರ ಪರಿಗ್ರಹತ್ಯಾಗ ಭಾವವೂ (೧ ಮಿಥ್ಯಾತ್ವ ೨ ಕ್ರೋಧ ೩ ಮಾನ ೪ ಮಾಯಾ ೫ ಲೋಭ ೬ ಹಾಸ್ಯ ೭ ರತಿ ೮ ಅರತಿ ೯ ಶೋಕ ೧೦ ಭಯ ೧೧ ಜುಗುಪ್ಸಾ ೧೨ ಸ್ತ್ರೀವೇದ ೧೩ ಪುಂವೇದ ೧೪ ನಪುಂಸಕವೇದಗಳೆಂಬೀ ಹದಿನಾಲ್ಕು ಅಂತರಂಗಪರಿಗ್ರಹಗಳಾಗಿವೆ. ೧ ಕ್ಷೇತ್ರ ೨ ವಾಸ್ತು ೩ ಹಿರಣ್ಯ ೪ ಸುವರ್ಣ ೫ ಧನ ೬ ಧಾನ್ಯ ೭ ದಾಸೀ ೮ ದಾಸ ೯ ಕುಪ್ಯ ೧೦ ಭಾಂಡಗಳೆಂಬೀ ಹತ್ತು ಬಾಹ್ಯಪರಿಗ್ರಹಗಳಾಗಿವೆ) ಧರ್ಮವನ್ನು ತಿಳಿದಿರುವಿಕೆಯೂ ಸೌಜನ್ಯವೂ ಸಾಧುಜನರಿಗೆ ಭವಭ್ರಮಣರೂಪವಾದ ಸಂಸಾರವನ್ನು ನಾಶಮಾಡುವ ಲಕ್ಷಣಗಳಾಗಿವೆ.



**ಕಿಂ ದೀಕ್ಷಾಗ್ರಹಣೇನ ತೇ ಯದಿ ಧನಾಕಾಂಕ್ಷಾ ಭವೇಚ್ಚೇತಸಿ**
**ಕಿಂ ಗಾರ್ಹಸ್ಥ್ಯಮನೇನ ವೇಷಧರಣೇನಾಸುಂದರಂ ಮನ್ಯಸೇ ।**
**ದ್ರವ್ಯೋಪಾರ್ಜನಚಿತ್ತಮೇವ ಕಥಯತ್ಯಭ್ಯಂತರಸ್ಥಾಂಗನಾ**
**ನೋಚೇದರ್ಥಪರಿಗ್ರಹಗ್ರಹಮತಿರ್ಭಿಕ್ಷೋ ನ ಸಂಪದ್ಯತೇ ॥ ೫ ॥**

೫. ಎಲೈ ಭಿಕ್ಷುವೆ! ನಿನ್ನ ಮನಸ್ಸಿನಲ್ಲಿ ಧನಾಪೇಕ್ಷೆಯಿರುವುದಾದರೆ ನಿರ್ಗ್ರಂಥ ಮುನಿದೀಕ್ಷಾಗ್ರಹಣದಿಂದೇನು ಪ್ರಯೋಜನ? ಈ ಬೆತ್ತಲೆಯ ವೇಷಕ್ಕಿಂತ ವಸ್ತ್ರಾಭೂಷಣಗಳಿಂದಲಂಕೃತವಾದ ಗೃಹಸ್ಥವೇಷವು ಕೆಟ್ಟುದೆಂದು ತಿಳಿಯುವೆಯೋ? ಹಣವನ್ನು ಸಂಪಾದಿಸಬೇಕೆಂಬ ಮನಸ್ಸೇ ನಿನ್ನಲ್ಲಿ ಸ್ತ್ರೀಕಾಂಕ್ಷೆಯಿದೆಯೆಂಬುದನ್ನು ಹೇಳುತ್ತದೆ. ಇಲ್ಲದಿದ್ದರೆ ಅರ್ಥಪರಿಗ್ರಹವನ್ನು ಸ್ವೀಕರಿಸಬೇಕೆಂಬ ಬುದ್ಧಿಯುಂಟಾಗುವುದಿಲ್ಲವು. ಉದರಪೂರ್ತಿಯಾಗಿ ಆಹಾರವು ಗೃಹಸ್ಥರ ಮನೆಯಲ್ಲಿ ದೊರೆಯುವುದಾದಮೇಲೆ ಮತ್ತೇಕೆ ಧನಾಕಾಂಕ್ಷೆಯೆಂದು ಭಾವವು.

**ಯೋಷಾಷಂಡಕಗೋವಿವರ್ಜಿತಪದೇ ಸಂತಿಷ್ಠ ಭಿಕ್ಷೋ ಸದಾ**
**ಭುಕ್ತ್ವಾಹಾರಮಕಾರಿತಂ ಪರಗೃಹೇ ಲಬ್ಧಂ ಯಥಾಸಂಭವಂ ।**
**ಷಡ್ಢಾವಶ್ಯಕಸತ್ಕ್ರಿಯಾಸು ನಿರತೋ ಧರ್ಮಾನುರಾಗಂ ವಹನ್**
**ಸಾರ್ಧಂ ಯೋಗಿಭಿರಾತ್ಮಭಾವನಪರೋ ರತ್ನತ್ರಯಾಲಂಕೃತಃ ॥ ೬ ॥**

೬. ಎಲೈ ಭಿಕ್ಷುವೆ! ನೀನು ಯಾವಾಗಲೂ ಸ್ತ್ರೀ ನಪುಂಸಕ ಮತ್ತು ಗೋವುಗಳಿಲ್ಲದ ಸ್ಥಾನದಲ್ಲಿರು. ಬೇರೆಯವರ ಮನೆಯಲ್ಲಿ ದೊರಕಿದ ಮತ್ತು ನಿನಗೋಸ್ಕರಮಾಡಲ್ಪಡದಿರುವ ಆಹಾರವನ್ನು ಯೋಗ್ಯತಾನುಸಾರವಾಗಿ—ಭೋಗಾಂತರಾಯಕರ್ಮದ ಕ್ಷಯೋಪಶಮಾನುಸಾರವಾಗಿ ಭುಂಜಿಸಿ ತ್ರಿಕಾಲಸಾಮಾಯಿಕ ತೀರ್ಥಂಕರಸ್ತೋತ್ರ ದೇವವಂದನಾ ಪ್ರತಿಕ್ರಮಣ ಪ್ರತ್ಯಾಖ್ಯಾನ ಕಾಯೋತ್ಸರ್ಗಗಳೆಂಬೀ ಉತ್ತಮ ಷಡಾವಶ್ಯಕಕ್ರಿಯೆಗಳಲ್ಲಿ ಆಸಕ್ತನೂ ಉತ್ತಮಕ್ಷಮಾ ಮಾರ್ದವ ಆರ್ಜವ ಶೌಚ ಸತ್ಯ ಸಂಯಮ ತಪಃ ತ್ಯಾಗ ಆಕಿಂಚನ್ಯ ಬ್ರಹ್ಮಚರ್ಯಗಳೆಂಬೀ ದಶಧರ್ಮಗಳಲ್ಲಿ ಅನುರಾಗವನ್ನು ವಹಿಸಿರುವವನೂ ಆತ್ಮಚಿಂತನಾಪರನೂ ಸಮ್ಯಗ್ದರ್ಶನ ಸಮ್ಯ

ಜ್ಞಾನ ಸಮ್ಯಕ್ಚಾರಿತ್ರಗಳೆಂಬೀ ರತ್ನತ್ರಯದಿಂದಲಂಕೃತನೂ ಆಗಿ ಯೋಗಿಗಳೊಡನೆ ವಾಸಮಾಡು.

**ದುರ್ಗಂಧಂ ವದನಂ ವಪುರ್ಮಲಭೃತಂ ಭಿಕ್ಷಾಟನಾದ್ಭೋಜನಂ**
**ಶಯ್ಯಾ ಸ್ಥಂಡಿಲಭೂಮಿಷು ಪ್ರತಿದಿನಂ ಕಟ್ಯಾಂ ನ ತೇ ಕರ್ಪಟಂ ।**
**ಮುಂಡಂ ಮುಂಡಿಮರ್ಧದಗ್ಧಶವವತ್ತ್ವಂ ದೃಶ್ಯಸೇಽನ್ಯೈರ್ಜನೈಃ**
**ಸಾಧೋದ್ಯಾಪ್ಯಬಲಾಜನಸ್ಯ ಭವತೋ ಗೋಷ್ಠೀ ಕಥಂ ಶೋಭತೇ ॥**
**॥ ೭ ॥**

೭. ಎಲೈ ಸಾಧುವೆ ! ನೀನು ಹಲ್ಲುಗಳನ್ನು ತೊಳೆಯದಿರುವ ನಿಯಮದಿಂದ ನಿನ್ನ ಮುಖವು ದುರ್ಗಂಧವಾಗಿಯೂ ಸ್ನಾನವನ್ನು ಮಾಡಬಾರದೆಂಬ ವಿಧಿಯಿರುವುದರಿಂದ ನಿನ್ನ ದೇಹವುಕೊಳೆಯುಳ್ಳದಾಗಿಯೂ ಭಿಕ್ಷಾಟನವನ್ನು ಮಾಡುವುದರಿಂದ ಪ್ರಾಪ್ತವಾಗುವ ಭೋಜನವೂ ಯಾವಾಗಲೂ ಮರಳು ಕಲ್ಲುಗಳುಳ್ಳ ಭೂಮಿಗಳಲ್ಲಿ ಮಲಗುವಿಕೆಯೂ ನಿನ್ನ ಸೊಂಟದಲ್ಲಿ ವಸ್ತ್ರವಿಲ್ಲದಿರುವಿಕೆಯೂ ತಲೆಯು ಬೋಳಿಸಲ್ಪಟ್ಟುದಾಗಿರುವಿಕೆಯೂ ಉಳ್ಳ ನಿನ್ನನ್ನು ಬೇರೆ ಜನರು ಅರ್ಧಭಾಗವು ಸುಡಲ್ಪಟ್ಟ ಹೆಣವನ್ನೋಪಾದಿಯಲ್ಲಿ ಕಾಣುವರು. ನಿನಗೆ ಈಗಲೂ ಹೆಂಗುಸರ ಗೋಷ್ಠಿ (ಸಭೆ) ಯು ಹೇಗೆ ಶೋಭಿಸುತ್ತದೆ ?

**ಅಂಗಂ ಶೋಣಿತಶುಕ್ರಸಂಭವಮಿದಂ ಮೇದೋಸ್ಥಿಮಜ್ಜಾಕುಲಂ**
**ಬಾಹ್ಯೇ ಮಾಕ್ಷಿಕಪತ್ರಸನ್ನಿಭಮಹೋ ಚರ್ಮಾವೃತಂ ಸರ್ವತಃ ।**
**ನೋಚೇತ್ಕಾಕಬಕಾದಿಭಿರ್ವಪುರಹೋ ಜಾಯೇತ ಭಕ್ಷ್ಯಂ ಧ್ರುವಂ**
**ದೃಷ್ಟ್ವಾದ್ಯಾಪಿ ಶರೀರಸದ್ಮನಿ ಕಥಂ ನಿರ್ವೇಗತಾ ನಾಸ್ತಿ ತೇ ॥ ೮ ॥**

೮. ಎಲೈ ಸಾಧುವೆ ! ನಿನಗೆ ಶರೀರವೆಂಬ ಮನೆಯಲ್ಲಿ ವೈರಾಗ್ಯವೇಕಿಲ್ಲ ? ಆಶ್ಚರ್ಯ ! ಈ ದೇಹವು ತಾಯಿಯ ರಕ್ತದಿಂದಲೂ ತಂದೆಯ ವೀರ್ಯದಿಂದಲೂ ಉಂಟಾದುದಾಗಿದೆ. ಮೇದಸ್ಸು (ನರ) ಮೂಳೆ ಮಜ್ಜಾ—ದೇಹಸಾರಗಳಿಂದ ವ್ಯಾಪ್ತವಾಗಿದೆ. ಹೊರಗೆ ನೊಣದ ರೆಕ್ಕೆಗೆ ಸಮಾನವಾದ ಚರ್ಮದಿಂದ ಎಲ್ಲಾ ಕಡೆಗಳಿಂದಲೂ ಆವರಿಸಲ್ಪಟ್ಟಿದೆ. ಇಲ್ಲದಿದ್ದರೆ ಕಾಗೆ ಕೊಕ್ಕರೆ ಮೊದಲಾದುವುಗಳಿಗೆ ನಿಶ್ಚಯವಾಗಿ ಭಕ್ಷ್ಯವಾಗುತ್ತಿದ್ದಿತು. ಆಶ್ಚರ್ಯ !



**ದುರ್ಗಂಧಂ ನವಭಿರ್ವಪುಃ ಪ್ರವಹತಿ ದ್ವಾರೈರಿದಂ ಸಂತತಂ**
**ತದ್ದೃಷ್ಟ್ವಾಪಿ ಚ ಯಸ್ಯ ಚೇತಸಿ ಪುನರ್ನಿರ್ವೇಗತಾ ನಾಸ್ತಿ ಚೇತ್ ।**
**ತಸ್ಯಾನ್ಯದ್ಭುವಿ ವಸ್ತು ಕೀದೃಶಮಹೋ ತತ್ಕಾರಣಂ ಕಥ್ಯತಾಂ**
**ಶ್ರೀಖಂಡಾದಿಭಿರಂಗಸಂಸ್ಕೃತಿರಿಯಂ ವ್ಯಾಖ್ಯಾತಿ ದುರ್ಗಂಧತಾಂ**
**॥ ೯ ॥**

೯. ಎಲೈ ಮುನಿಯೆ! ಈ ಶರೀರವು ಒಂಬತ್ತು ಬಾಗಿಲುಗಳಿಂದ(ಗುದ-ಶಿಶ್ನ—ಬಾಯಿ—ಮೂಗಿನ ಹೊಳ್ಳೆಗಳು—ಕಣ್ಣುಗಳು—ಕಿವಿಗಳು) ಯಾವಾಗಲೂ ದುರ್ಗಂಧವನ್ನು ಹರಿಸುತ್ತಿರುವುದು. ಅದನ್ನು ನೋಡಿಯೂ ಯಾವನ ಮನಸ್ಸಿನಲ್ಲಿ ವೈರಾಗ್ಯವುಂಟಾಗುವುದಿಲ್ಲವೋ ಅವನಿಗೆ ಭೂಮಿಯ ಮೇಲೆ ವೈರಾಗ್ಯವನ್ನುಂಟುಮಾಡುವ ಎಂತಹ ವಸ್ತುವಿರುವುದು ? ಆಶ್ಚರ್ಯ! ವೈರಾಗ್ಯವುಂಟಾಗದಿರಲು ಕಾರಣವಾವುದು ಹೇಳಲ್ಪಡಲಿ. ಶ್ರೀಗಂಧ ಮೊದಲಾದುವುಗಳಿಂದ ಈ ಶರೀರಸಂಸ್ಕಾರವು ದೇಹದಲ್ಲಿ ದುರ್ಗಂಧವಿರುವಿಕೆಯನ್ನು ತಿಳಿಸುತ್ತದೆ. ಗಂಧ ಪುಷ್ಪ ಮೊದಲಾದ ಸುಗಂಧವಸ್ತುಗಳು ಮನುಷ್ಯದೇಹವನ್ನು ಸೋಂಕಿ ದುರ್ಗಂಧವುಳ್ಳವಾಗುವುದರಿಂದ ಈ ದೇಹವು ದುರ್ಗಂಧವೆಂಬುದನ್ನು ತಿಳಿಸುತ್ತವೆಂದು ಭಾವವು.

**ಸ್ತ್ರೀಣಾಂ ಭಾವವಿಲಾಸವಿಭ್ರಮಗತಿಂ ದೃಷ್ಟ್ವಾನುರಾಗಂ ಮನಾಕ್**
**ಮಾಗಾಸ್ತ್ವಂ ವಿಷವೃಕ್ಷಪಕ್ವಫಲವತ್ಸುಸ್ವಾದವಂತ್ಯಸ್ತದಾ ।**
**ಈಷತ್ಸೇವನಮಾತ್ರತೋಽಪಿ ಮರಣಂ ಪುಂಸಾಂ ಪ್ರಯಚ್ಛಂತಿ ಭೋಃ**
**ತಸ್ಮಾದ್ದೃಷ್ಟಿವಿಷಾಹಿವತ್ಪರಿಹರ ತ್ವಂ ದೂರತೋ ಮೃತ್ಯವೇ ॥ ೧೦ ॥**

೧೦. ಎಲೈ ಭಿಕ್ಷುವೆ! ನೀನು ಸ್ತ್ರೀಯರ ಹಾವ-ಭಾವ-ವಿಲಾಸ-ವಿಭ್ರಮ-ಗಮನಗಳನ್ನು ನೋಡಿ ಸ್ವಲ್ಪಾನುರಾಗವನ್ನೂ ಹೊಂದಬೇಡ. ಮೊದಮೊದಲು ಅವು ವಿಷವೃಕ್ಷದ ಹಣ್ಣುಗಳಂತೆ ರುಚಿಕರವಾಗಿರುತ್ತವೆ. ಆ ಫಲಗಳ ಸ್ವಲ್ಪ ಸೇವನೆಯಿಂದಲೂ ಅವು ಮನುಷ್ಯರಿಗೆ ಮರಣವನ್ನು ಕೊಡುತ್ತವೆ. ಆದುದರಿಂದ, ದೃಷ್ಟಿವಿಷವುಳ್ಳ ಹಾವನ್ನು ದೂರದಲ್ಲಿ ತ್ಯಜಿಸುವಂತೆ, ಸ್ತ್ರೀಯರನ್ನು ದೂರವಾಗಿ ತ್ಯಜಿಸು.

**ಯದ್ಯದ್ವಾಂಛತಿ ತತ್ತದೇವ ವಪುಷೇ ದತ್ತಂ ಸುಪುಷ್ಟಂ ತ್ವಯಾ**
**ಸಾರ್ಧಂ ನೈತಿ ತಥಾಪಿ ತೇ ಜಡಮತೇ ಮಿತ್ರಾದಯೋ ಯಾಂತಿ ಕಿಂ ।**
**ಪುಣ್ಯಂ ಪಾಪಮಿತಿ ದ್ವಯಂ ಚ ಭವತೀ ಪೃಷ್ಟೇಽನುಯಾಹತಃ ತೇ**
**ತಸ್ಮಾನ್ಮಾಸ್ಮ ಕೃಥಾ ಮನಾಗಪಿ ಭವಾನ್ ಮೋಹಂ**
**ಶರೀರಾದಿಷು ॥೧೦॥**

೧೧. ಎಲೈ ಜಡಮತಿಯೆ ! ಯಾವ ಯಾವ ವಸ್ತುವನ್ನು ಈ ಶರೀರವು ಇಚ್ಛಿಸುತ್ತದೆಯೋ ಪುಷ್ಟಿಕರವಾದ ಆಯಾ ವಸ್ತುವನ್ನೇ ನೀನು ಈ ದೇಹಕ್ಕೆ ಕೊಟ್ಟು ಪೋಷಿಸಿದೆ. ಆದರೂ ಇದು ನಿನ್ನೊಡನೆ ಬರುವುದಿಲ್ಲ. ಅಂದ ಮೇಲೆ ಗೆಳೆಯರು ಮೊದಲಾದವರು ನಿನ್ನೊಡನೆ ಬರುವರೇನು ? ಈ ಲೋಕ ದಲ್ಲಿ ಮಾಡಿದ ಪುಣ್ಯಪಾಪಗಳೆರಡೇ ನಿನ್ನ ಹಿಂದೆ ಬರುವುದು. ಆದುದರಿಂದ ನೀನು ದೇಹ ಮೊದಲಾದುವುಗಳಲ್ಲಿ ಸ್ವಲ್ಪವೂ ಮೋಹವನ್ನು ಮಾಡಬೇಡ.

**ಶೋಚಂತೇ ನ ಮೃತಂ ಕದಾಪಿ ವನಿತಾ ಯದ್ಯಸ್ತಿ ಗೇಹೇ ಧನಂ**
**ತಚ್ಚೇನ್ನಾಸ್ತಿ ರುದಂತಿ ಜೀವನಧಿಯಾ ಸ್ಮೃತ್ವಾ ಪುನಃ ಪ್ರತ್ಯಹಂ ।**
**ಕೃತ್ವಾ ತದ್ದಹನಕ್ರಿಯಾಂ ನಿಜನಿಜವ್ಯಾಪಾರಚಿಂತಾಕುಲಾಃ**
**ತನ್ನಾಮಾಪಿ ಚ ವಿಸ್ಮರಂತಿ ಕತಿಭಿಃ ಸಂವತ್ಸರೈರ್ಯೋಷಿತಃ ॥೧೨॥**

೧೨. ಎಲೈ ಜೀವನೆ ! ಮನೆಯಲ್ಲಿ ಧನವಿದ್ದರೆ ಸ್ತ್ರೀಯರು ಸತ್ತವನನ್ನು ಕುರಿತು ಎಂದೂ ದುಃಖಪಡುವುದಿಲ್ಲ, ಅದಿಲ್ಲದಿದ್ದರೆ ಮುಂದೆ ಜೀವಿಸಬೇಕೆಂಬ ಆಸೆಯಿಂದ ಪ್ರತಿದಿನವೂ ಸ್ಮರಿಸಿಕೊಂಡು ಮತ್ತೆ ಅಳುತ್ತಾರೆ. ಸತ್ತವನ ದಹನಕ್ರಿಯೆಯನ್ನು ಮಾಡಿ ತಂತಮ್ಮ ಕೆಲಸಗಳ ಯೋಚನೆಯಲ್ಲಿ ಆಸಕ್ತರಾದ ಆ ಸ್ತ್ರೀಯರು ಕೆಲವು ವರ್ಷಗಳಲ್ಲಿ ಅವನ ಹೆಸರನ್ನೂ ಮರೆತುಬಿಡುತ್ತಾರೆ.

**ಅಷ್ಟಾವಿಂಶತಿಭೇದಮಾತ್ಮನಿ ಪುರೈವಾರೋಪ್ಯ ಸಾಧೋ ವ್ರತಂ**
**ಸಾಕ್ಷೀಕೃತ್ಯ ಜಿನಾನ್ ಗುರೂನಪಿ ಕಿಯತ್ಕಾಲಂ ತ್ವಯಾ ಪಾಲಿತಂ ।**
**ಭಕ್ತುಂ ವಾಂಛಸಿ ಶೀತವಾತವಿಹತೋ ಭೂತ್ವಾಽಧುನಾ ತದ್ವ್ರತಂ**
**ದಾರಿದ್ರ್ಯೋಪಹತಃ ಸ್ವವಾಂತಮಶನಂ ಭುಂಕ್ತೇ**
**ಕ್ಷುಧಾರ್ತೋಽಪಿ ಕಿಂ ॥ ೧೩ ॥**



೧೩. ಎಲೈ ಸಾಧುವೆ ! ಮೊತ್ತಮೊದಲು ನೀನು ತನ್ನಲ್ಲಿ ಇಪ್ಪತ್ತೆಂಟು (ಅಹಿಂಸಾ ೧, ಸತ್ಯ ೨, ಅಚೌರ್ಯ ೩, ಬ್ರಹ್ಮಚರ್ಯ ೪, ಪರಿಗ್ರಹತ್ಯಾಗ ಮಹಾವ್ರತ ೫, ಈರ್ಯಾಸಮಿತಿ ೬, ಭಾಷಾಸಮಿತಿ ೭, ಏಷಣಸಮಿತಿ ೮, ಆದಾನನಿಕ್ಷೇಪಣಸಮಿತಿ ೯, ವ್ಯುತ್ಸರ್ಗಸಮಿತಿ ೧೦, ಸ್ಪರ್ಶನ ೧೧, ರಸನಾ ೧೨, ಘ್ರಾಣ ೧೩, ಚಕ್ಷುಃ ೧೪, ಶ್ರೋತ್ರನಿಗ್ರಹ ೧೫, ಸಾಮಾಯಿಕ ೧೬, ತೀರ್ಥಂಕರಸ್ತವನ ೧೭, ವಂದನಾ ೧೮, ಪ್ರತಿಕ್ರಮಣ ೧೯, ಪ್ರತ್ಯಾಖ್ಯಾನ ೨೦, ಕಾಯೋತ್ಸರ್ಗ ೨೧, ಭೂಮಿಶಯನ ೨೨, ಅಸ್ನಾನ ೨೩, ಅದಂತಧಾವನ ೨೪, ನಗ್ನತ್ವ ೨೫, ಕೇಶಲೋಚ ೨೬, ಸ್ಥಿತಿಭೋಜನ ೨೭, ಏಕಭೋಜನ ೨೮) ಮೂಲಗುಣರೂಪವಾದ ವ್ರತವನ್ನು ಜಿನರ ಮತ್ತು ಗುರುಗಳ ಮುಂದೆ ಧಾರಣಮಾಡಿ ಕೆಲವು ಕಾಲ ಅದನ್ನು ನೀನು ಪಾಲಿಸಿದೆ. ಈಗ ಚಳಿಗಾಳಿಗಳಿಂದ ಪೀಡಿತನಾಗಿ ಆ ವ್ರತವನ್ನು ಬಿಡಲಿಚ್ಛಿಸುವೆ. ಆದರೆ ಒಬ್ಬ ಮನುಷ್ಯನು ಬಡತನದಿಂದ ಪೀಡಿತನೂ ಹಸಿವೆಯಿಂದ ದುಃಖಿತನೂ ಆದರೂ ತಾನು ವಮನಮಾಡಿದ ಆಹಾರವನ್ನು ಭುಂಜಿಸುತ್ತಾನೆಯೋ ? ತಾನು ವಮನಮಾಡಿದ ಆಹಾರವನ್ನು ಭುಂಜಿಸಲೆಳಸದಿರುವಂತೆ ತಾನು ಬಿಟ್ಟ ಪರಿಗ್ರಹವನ್ನು ಮತ್ತೆ ಬಯಸಬಾರದೆಂದು ಭಾವವು.

**ಅನ್ಯೇಷಾಂ ಮರಣಂ ಭವಾನಗಣಯನ್ ಸ್ವಸ್ಯಾಮರತ್ವಂ ಸದಾ**
**ದೇಹಿನ್ ಚಿಂತಯಸೀಂದ್ರಿಯದ್ವಿಪವಶೀ ಭೂತ್ವಾ ಪರಿಭ್ರಾಮ್ಯಸಿ ।**
**ಅದ್ಯ ಶ್ವಃ ಪುನರಾಗಮಿಷ್ಯತಿ ಯಮೋ ನ ಜ್ಞಾಯತೇ ತತ್ತ್ವತಃ**
**ತಸ್ಮಾದಾತ್ಮಹಿತಂ ಕುರು ತ್ವಮಚಿರಾತ್ ಧರ್ಮಂ**
**ಜಿನೇಂದ್ರೋದಿತಂ ॥ ೧೪ ॥**

೧೪. ಎಲೈ ಆತ್ಮನೆ! ನೀನು ಬೇರೆಯವರ ಮರಣವನ್ನು ಯೋಚಿಸದೆ ನಿನಗೆ ಯಾವಾಗಲೂ ಮರಣವಿಲ್ಲವೆಂದೇ ತಿಳಿಯುವೆ. ನೀನು ಇಂದ್ರಿಯಗಳೆಂಬ ಆನೆಗಳಿಗೆ ವಶವರ್ತಿಯಾಗಿ ಸಂಸಾರದಲ್ಲಿ ಅಲೆಯುವೆ. ಮತ್ತೆ ನಿಜವಾಗಿ ಇಂದೋ ನಾಳೆಯೋ ಯಮನು ಬರುವನೆಂದು ತಿಳಿಯುವುದಿಲ್ಲ. ಆದುದ ರಿಂದ ನೀನು ಆತ್ಮಹಿತಕರವಾದ ಮತ್ತು ಜಿನೇಶ್ವರರಿಂದ ಹೇಳಲ್ಪಟ್ಟಿರುವ ಧರ್ಮವನ್ನು ಶೀಘ್ರವಾಗಿ ಮಾಡು.